ನಂತರ ಸೇರಿದ ಪರಶುರಾಮ ತನ್ನ ಯುನಿಟ್ಟಿಗೇ ಬಂದಿದ್ದ. ಈಗ ಹವಾಲ್ದಾರ ಆಗಿದ್ದಾನೆ. ರಜೆ ಬೇಕು ಅಂತ ಬಂದವ ಒಂದೇ ಊರವರು ಅನ್ನೋ ಕಾರಣಕ್ಕೆ ಸಿಗೋ ನಿರೀಕ್ಷೆಯನ್ನೂ ಇಟ್ಟುಕೊಂಡಿದ್ದನೇನೋ. ಇನ್ನೂ ಇಬ್ಬರು ಅತ್ಯವಶ್ಯ ಕಾರಣಗಳಿಗೇ ರಜೆ ಕೇಳಿದ್ದರು. ತಾರತಮ್ಯ ಮಾಡಲಾಗದ ಸಂದಿಗ್ಧದಲ್ಲಿ ಎಲ್ಲರಿಗೂ ಶಿಫಾರಸು ಮಾಡಿದರು. ಓಸಿ ಕರೆದವರು, 'ಸುಬೇದಾರ ಸಾಬ್, ಎಂಟೇ ದಿನಕ್ಕೆ ಕ್ವಾರ್ಟರಮಾಸ್ಟರ್ ಇನ್‌ಸ್ಪೆಕ್ಷನಿದೆ. ಎಲ್ಲರ್ನೂ ರಜೆ ಕಳಿಸಿ ಹೇಗೆ ನಿಭಾಯಿಸ್ತೀರಾ? ಎಲ್ರಿಗು ಎಲ್ಲಾ ಸಂದರ್ಭದಲ್ಲು ಸಹಾಯಮಾಡಿ ಒಳ್ಳೇಯವ್ರು ಅನಿಸ್ಕೊಳೋದು ಅಸಾಧ್ಯ. ದಕ್ಷ ಅಂತ ಹೆಸರಿರೊ ಜೇಸಿಓ ನೀವು. ಈಗೇನಾಯ್ತು?' ತರಾಟೆಗೆ ತೆಗೆದುಕೊಂಡಿದ್ದರು. ಅರ್ಥಮಾಡಿಕೊಂಡ ತಾವು ಯಾರಿಗು ರಜೆ ಕೊಟ್ಟಿರಲಿಲ್ಲ. ಪರಶುರಾಮ ಬಹುಶಃ ಮನೆಗೆ ಬರೆದಿರಬೇಕು. ಡ್ಯೂಟಿ ಅಂದರೆ ಇಂಥದ್ದೆಲ್ಲ ಇರೋದೆ; ಬಿಡು. ಅಂತ ಮನಸಿನ ಮೂಲೆಗೆ ತಳ್ಳಿ ಕೈತೊಳೆಯಲು ಎದ್ದರು. ಮಲಗಿದರೆ ನಿದ್ದೆ ಬರಲಿಲ್ಲ. ಸಂಜೆ ತಿರುಗಾಡಿ ಬರತೀನಿ ಅಂತ ಕೆರೆಯ ಕಡೆ ಹೋದರು.

ರಾತ್ರಿ ಸದ್ದಿಲ್ಲದೆ ಮುಸುಕಿಕೊಳ್ಳುತ್ತಲಿತ್ತು. ಸೂಟುಕೇಸು ಚೀಲಗಳನ್ನು ಸಿದ್ಧ ಮಾಡಿಟ್ಟುಕೊಂಡಾಗಿತ್ತು. ಟೀವಿಯ ಪಕ್ಕ ಕಾಲುಮಣೆಮೇಲೆ ಕುಳಿತವರು, 'ಅಮ್ಮ, ಚೆನ್ನಯ್ಯ ಹೊಲದ ಕೆಲಸ ಮಾಡಿಕೊಡತಾನೆ ಅಲ್ವ?' ವಿಚಾರಿಸಿದರು.

'ಅದೇನು... ಹೊರಡೋ ಹಿಂದಿನದಿನ ನೆನಪಾಯ್ತು ನಿಂಗೆ? ಇಷ್ಟುವರ್ಷ ಅವನಲ್ದೆ ಇನ್ಯಾರು ಮಾಡಿದ್ದು ಹೊಲಾನ?'

'ಅಲ್ಲಾ, ಈ ವರ್ಷನೂ ಇಲ್ಲೀವರ್ಗೂ ಮಳೆ ಬೀಳ್ಳಿಲ್ವಲ್ಲಾ. ಅವನೆಲ್ಲಾದ್ರು ಕೆಲಸ ಹುಡುಕ್ಕೊಂಡು ಹೋದ್ರೆ ಅನಿಸ್ತು; ಕೇಳ್ದೆ.'

'ಬಿಡಪ್ಪಾ ಅತ್ಲಾಗೆ. ಮಳೇನೆ ಬರದಿದ್ರೆ ನಮ್ಮ ಹೊಲದಲ್ಲಾದ್ರು ಕೆಲಸ ಎಲ್ಲಿ ಇರತದೆ? ಈಗ ಆ ಚಿಂತೆ ಬಿಡು ನೀನು; ಇನ್ನೂ ಎರಡು ತಿಂಗಳದೆ ಮಳೆಗಾಲ...'

ನರಸಪ್ಪ ಪರ್ಸಿನಿಂದ ಹಣ ತೆಗೆದು ಎಣಿಸಿದರು. ಮುಕ್ಕಾಲುವಾಸಿ ನೋಟುಗಳನ್ನ 'ಇಕಾ... ಇದಿಟ್ಕಂಡಿರು' ಅಂತ ಗೌರಮ್ಮನ ಕೈಯಲ್ಲಿರಿಸಿದರು. ಸಮಯ ಎಲ್ಲರನ್ನೂ ಒಂದು ಭಾವುಕತೆಯತ್ತ ಎಳೆಯುತ್ತಿರುವಂತಿತ್ತು.

ರಾತ್ರಿ ಒಂದೆರಡು ಮಾತುಗಳಲ್ಲಿ ಊಟ ಮುಗಿಯಿತು. ಸೀರಿಯಲ್ ನೋಡುತ್ತಿದ್ದ ಗೌರಮ್ಮ, 'ಎಲ್ಲಾ ಒಂದೇ ರೀತಿ ಕತೆ. ಜಗಳ; ತಪ್ಪಿದ್ರೆ ಷಡ್ಯಂತ್ರ...' ಅನ್ನುತ್ತ ಟೀವಿ ಆರಿಸಿ ತನ್ನ ಹಾಸಿಗೆಯತ್ತ ಹೋದಳು. ಕೋಣೆಯಲ್ಲಿ ಮಂಚದಮೇಲೆ ಅಡ್ಡಾಗಿದ್ದರು ನರಸಪ್ಪ. ಕೆಲಸ ಮುಗಿಸಿ ಒಳಬಂದು ಬಾಗಿಲ ಕೊಂಡಿ ಹಾಕುತ್ತಿರುವ ಹೆಂಡತಿಯ ಹಿಂಭಾಗ ಕಾಣುತ್ತಿತ್ತು. ಅವಳಿಗೆ ಈಗ ಸುಮಾರು ನಲವತ್ತೈದು. ಸ್ವಲ್ಪ ದಪ್ಪಗಾಗಿದಾಳೆ, ಮೈಯೂ ಅಷ್ಟಿಷ್ಟು ಸಡಿಲವಾಗಿದೆ. ಆದರೆ ಆಕರ್ಷಣೆ ಕಳೆದುಕೊಂಡಿಲ್ಲ ಅಂದುಕೊಂಡರು. ತಲೆದೆಸೆಯಲ್ಲಿಟ್ಟ ಪ್ಯಾಂಟಿನ ಕಿಸೆಯಿಂದ ಒಂದಿಷ್ಟು ನೋಟುಗಳನ್ನು ತೆಗೆದು, 'ಇಕಾ... ನಿನ್ಹತ್ತಿರ ಇರ್ಲಿ. ಬೇಕಾದಾಗ ಯಾರದೋ ಮುಖ ನೋಡೋದು ಬ್ಯಾಡ...' ಅನ್ನುತ್ತ ಕೈಯಲ್ಲಿ ತುರುಕಿದವರು, 'ಕಾಂತೂ... ಎಲ್ಲಾ ಕೆಲಸ ನೀವು ನೀವೇ ನಿಭಾಯ್ಸಿದಿರಿ ಇಷ್ಟೂ ವರ್ಷ...' ಅಂದರು. ಗಂಡನ ದನಿಯಲ್ಲಿದ್ದ ಬೇಸರ ಗಮನಿಸಿದ ಕಾಂತಮ್ಮ, 'ಅದೇನಿಲ್ಲ. ನೀವು ಅಷ್ಟುದೂರ ಹೋಗಿ ದುಡುದು ಕಳಿಸಿದ್ರಲ್ಲಿ ಆದ್ದು ಇದೆಲ್ಲಾ. ನಿಭಾಯ್ಸಿದ್ದು ಏನು ಮಹಾ ಗಂಟ್ಟಿ?...' ಅಂದಳು ಹತ್ತಿರ ಕೂಡುತ್ತಾ. 'ಕಾಂತೂ...' ಅನ್ನುತ್ತ ಆರ್ತರಾಗಿ ಶರಣು ಬೇಡುವವರಂತೆ ಹೆಂಡತಿಯತ್ತ